ದಿಃ 06-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ. **PBP** ವಕೀಲರಿಂದ:

ನನ್ನ ತಂದೆಗೆ ಒಟ್ಟು 5 ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು. ಅವರುಗಳ ಹೆಸರು 11) ಬಾಬು ಹುಸೇನ ಬಾಷಾ, 2) ಬಾಷಾ ಹುಸೇನ ಬಾಷಾ, 3) ಇಸ್ಮಾಯಿಲ, 4) ಇಮಾನಸಾಬ, 5) ಅಬ್ದುಲ ಸತ್ತಾರ, 6) ಗುಡುಮಾ, 7) ಶಾಫರಿನ, 8) ಶಾಹೇರಾ ಇರುತ್ತದೆ. 2 ಮತ್ತು 3 ನೇ ಪ್ರತಿವಾದಿಯರು ನಮ್ಮ ಸಹೋದರ ಸಂಬಂಧಿಗಳು ಇರುತ್ತಾರೆ.

ನನ್ನ ತಂದೆಗೆ ಒಟ್ಟು 18 ಎಕರೆ ಜಮೀನು ಇತ್ತು. ಸದರಿ ಆಸ್ತಿಯಲ್ಲಿ ಇನ್ನೂ ಪಾಲು ಆಗಿರುವುದಿಲ್ಲ. ನನಗೆ ಸದರಿ ಆಸ್ತಿಯ ಸ.ನಂ. ಹೇಳಲು ಬರುವುದಿಲ್ಲ. ಸ.ನಂ. 285/2 ರಲ್ಲಿ 5 ಎಕರೆ ಜಮೀನು ಹಿರಿಯರು ಇಸ್ಮಾಯಿಲ ರವರ ಹೆಸರಿಗೆ ಮಾಡಿರುತ್ತಾರೆ. ಕಬ್ಜಾ ವಹಿವಾಟಿನಲ್ಲಿ ನಮ್ಮ ಅಣ್ಣ ತಮ್ಮಂದಿರು ಎಲ್ಲರೂ ಇರುತ್ತೇವೆ. ಇಸ್ಮಾಯಿಲ ಈತನು ತೀರಿಕೊಳ್ಳುವ ಪೂರ್ವದಲ್ಲಿ ನನಗೆ ಭೂಮಿ ಉಳುಮೆ ಮಾಡಲು ನೀಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಇಸ್ಮಾಯಿಲ ರವರ ಮಕ್ಕಳಿಗೆ ಗೊತ್ತಾಗದ ಹಾಗೆ ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಿರಿಯರು ನನ್ನ ಹೆಸರಿಗೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಇಸ್ಮಾಯಿಲ ರವರ ಮಕ್ಕಳ ಒಪ್ಪಿಗೆ ಪಡೆದಿಲ್ಲ ಆದರೆ ಆತನ ಹೆಂಡತಿ ಒಪ್ಪಿಗೆ ನೀಡಿರುತ್ತಾರೆ. ಒಪ್ಪಿಗೆ ಪತ್ರವನ್ನು ನ್ಯಾಯಾಲಯಕೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಇಸ್ಮಾಯಲ ರವರು ಜೀವಂತ ಇರುವಾಗ ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನನ್ನ ಹೆಸರಿಗೆ ವಾರಸಾ ಮೂಲಕ ಗ್ರಾಮಲೆಕ್ಕಾಧಿಕಾರಿಗಳು ಮಾಡಿರುತ್ತಾರೆ. ಸದರಿ ವಾರಸಾ ಕಾಗದವನ್ನು ನ್ಯಾಯಾಲಯಕೆ ಹಾಜರುಪಡಿಸಿರುತ್ತೇನೆ ಅಥವಾ ಇಲ್ಲೋ ನನಗೆ ಗೊತ್ತಿಲ್ಲ. ವಾರಸಾ ಪತ್ರವನ್ನು ಇಸ್ಮಾಯಿಲ ಮತ್ತು ಅವರ ಮಕ್ಕಳ ಗೈರು ಹಾಜರಾತಿಯಲ್ಲಿ ನಾನು ವಾರಸಾ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-8 ನ್ನು ಮಾಡಿಕೊಡುವಾಗ ವಾದಿ ಮತ್ತು ವಾದಿ ಮಕ್ಕಳ ಸಮ್ಮತಿ ಪಡೆದಿಲ್ಲ. ನಾನು ಪ್ರತಿವಾದಿ 2, 3 ರವರ ಹೆಸರಿಗೆ ಜಮೀನು ಮಾಡುವಾಗ ಇಸ್ಮಾಯಿಲ ರವರ ಒಪ್ಪಿಗೆ ಪಡೆದಿರುತ್ತೇವೆ. ನಾನು ದಾವಾ ಆಸ್ತಿಯನ್ನು

ಪ್ರತಿವಾದಿ 2, 3 ರವರ ಹೆಸರಿಗೆ ಮಾಡುವ ಸಮಯದಲ್ಲಿ ಎಲ್ಲರಿಗೂ ಹಣ ನೀಡಿರುತ್ತೇನೆ. ಹಣ ನೀಡಿರುವ ಕುರಿತು ದಾಖಲೆ ಇರುತ್ತದೆ. ಅದನ್ನು ನಾನು ವಕೀಲರಿಗೆ ನೀಡಿರುತ್ತೇನೆ. ಪ್ರತಿವಾದಿ 2, 3 ರವರು ನನ್ನ ಅಣ್ಣನ ಮಕ್ಕಳು ಇರುತ್ತಾರೆ. ನಿಪಿ 10 ಮಾಡಿಕೊಡಲು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಆಸ್ತಿಯ ಎಲ್ಲಾ ಆಸ್ತಿಯನ್ನು ನಾವೆಲ್ಲರೂ ಮಾರಿಕೊಂಡಿದ್ದು ಇಸ್ಮಾಯಿಲ ಸಾಬ ರವರ ಹೆಸರಿನಲ್ಲಿರುವ ಆಸ್ತಿ ಮಾತ್ರಾ ಇರುತ್ತದೆ. ನಮ್ಮ 5 ಜನ ಮಕ್ಕಳು ಶಿಕ್ಷಣ ಪಡೆದಿರುತ್ತೇವೆ. ವಾದಿಯರು ಪುಣೆ ಮುಂಬೈಗೆ ದುಡಿಯಲು ಹೋದಾಗ ನಾನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿ ರವರು ನಮಗೆ ಸಂಬಂಧ ಇರದೇ ಇದ್ದರೂ ನನ್ನ ಅಣ್ಣನ ಮಕ್ಕಳು ಇರುತ್ತಾರೆ ಎಂದು ಸುಳ್ಳು ಖೊಟ್ಟಿ ವಾಟ್ನಿ ಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ ಈ ದಾವಾ ಆಸ್ತಿಗೆ ವಾದಿಯರು ಮಾತ್ರಾ ವಾರಸುದಾರರು ಇರುತ್ತಾರೆ ಎಂದರೆ ಸರಿಯಲ್ಲ. ಅವರ ಆಸ್ತಿ ಪಡೆಯಲು ಸುಳ್ಳು ದಾಖಲೆ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ